


# ಜಾರ್ಜ್ ಟೌನ್ ಕಥೆ ಹೇಳುವ ಕಾರ್ಟೂನ್ಸ್

ಮಲೇಷಿಯಾದ ದ್ವೀಪನಗರ ಜಾರ್ಜ್ ಟೌನ್‌ನ ಆಕರ್ಷಣೆಗಳಲ್ಲೊಂದು ಅಲ್ಲಿನ 'ಬೀದಿ ಕಲೆ'. ನಗರದ ವಿವಿಧ ಬೀದಿಗಳಲ್ಲಿ ಕಾಣಸುವ ವ್ಯಂಗ್ಯಚಿತ್ರಗಳು, ನೋಡುಗರನ್ನು ಪ್ರಸನ್ನಗೊಳಿಸುವುದರೊಂದಿಗೆ ಅಲ್ಲಿನ ಕಥೆಯನ್ನೂ ಹೇಳುತ್ತವೆ.

■ ಡಾ. ಜೆ. ಬಾಲಕೃಷ್ಣ

ಜಾರ್ಜ್ ಟೌನ್ ಮಲೇಷಿಯಾದ ಪಿನಾಂಗ್ ರಾಜ್ಯದ ರಾಜಧಾನಿ ಹಾಗೂ ಅದೊಂದು ದ್ವೀಪನಗರ. 2008ರಲ್ಲಿ ಈ ನಗರವನ್ನು ವಿಶ್ವಸಂಸ್ಥೆಯು 'ಯುನೆಸ್ಕೊ ವಿಶ್ವ ಪಾರಂಪರಿಕ ತಾಣ'ವೆಂದು ಗುರುತಿಸಿದೆ. ಮಲಕ್ಕಾ ಕೊಲ್ಲಿಯ ಮಲಕ್ಕಾ ಮತ್ತು ಜಾರ್ಜ್ ಟೌನ್‌ಗಳು ಐನೂರು ವರ್ಷಗಳಿಂದ ಜಗತ್ತಿನ ಪೂರ್ವ ಮತ್ತು ಪಶ್ಚಿಮ ದೇಶಗಳ ನಡುವಿನ ವ್ಯಾಪಾರ ಹಾಗೂ ಸಾಂಸ್ಕೃತಿಕ ವಿನಿಮಯದ ಕೇಂದ್ರಗಳಾದುದರಿಂದ ಈ ಮಾನ್ಯತೆ ಸಿಕ್ಕಿದೆ. ಐನೂರು ವರ್ಷಗಳಿಂದ ಬಹು ಸಂಸ್ಕೃತಿಯ ಹಾಗೂ ಸಾಮರಸ್ಯದ ಪರಂಪರೆಯನ್ನು ಈ ನಗರವು ಇನ್ನೂ ಜೀವಂತವಾಗಿರಿಸಿಕೊಂಡಿದೆ. ಇಲ್ಲಿನ ಮಲಯರ ನಾಡಿಗೆ ಚೀನಿ ಮತ್ತು ಭಾರತೀಯರು ಬಂದು ನೆಲೆಸಿ ಸೌಹಾರ್ದತೆಯಿಂದ ಬದುಕುತ್ತಿದ್ದಾರೆ. ಭಾರತದ ಉಪಖಂಡದಿಂದ ಎರಡು ಸಾವಿರ ವರ್ಷಗಳ ಹಿಂದೆ ವ್ಯಾಪಾರಿಗಳು ಮಲೇಷಿಯಾದ ಉಪಖಂಡಕ್ಕೆ ಭೇಟಿ ನೀಡಿ ತಮ್ಮ ಧರ್ಮ, ಸಂಸ್ಕೃತಿಗಳನ್ನು ಪರಿಚಯಿಸಿದ್ದಾರೆ ಎಂದು ದಾಖಲೆಗಳು ತಿಳಿಸುತ್ತವೆ.

ಇಂದು ಮಲೇಷಿಯಾದ ಶೇ.61ರಷ್ಟು ಜನ ಮುಸಲ್ಮಾನ ಧರ್ಮ ಆಚರಿಸುತ್ತಿದ್ದು ಬೌದ್ಧ ಧರ್ಮ, ಕ್ರೈಸ್ತ ಧರ್ಮ, ಹಿಂದೂ ಧರ್ಮ, ತಾವೋ, ಸಿಖ್ ಧರ್ಮೀಯರೂ ಇದ್ದಾರೆ. 1957ರವರೆಗೂ ಬ್ರಿಟಿಷ್ ವಸಾಹತಾಗಿದ್ದ ಜಾರ್ಜ್ ಟೌನ್ ಯೂರೋಪಿಯನ್ ವಿಶಿಷ್ಟ ವಾಸ್ತುಶಿಲ್ಪದ ಪಾರಂಪರಿಕ ಕಟ್ಟಡಗಳನ್ನು ಹೊಂದಿದೆ. ಯುನೆಸ್ಕೊ ಪ್ರಕಾರ ಈ ರೀತಿಯ ಬಹು ಸಂಸ್ಕೃತಿಯ, ವಿಶಿಷ್ಟ ವಾಸ್ತು ವಿನ್ಯಾಸದ ನಗರಗಳಾದ ಮಲಕ್ಕಾ ಮತ್ತು ಜಾರ್ಜ್ ಟೌನ್‌ಗಳಿಗೆ ಸರಿಸಮನಾದುದು ಪೂರ್ವ ಮತ್ತು ದಕ್ಷಿಣ ಏಷಿಯಾದಲ್ಲಿ ಮತ್ತೆಲ್ಲೂ ಇಲ್ಲ.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಭಾರತಕ್ಕೆ ಬರುವುದಕ್ಕೂ ಮೊದಲೇ 1786ರಲ್ಲಿ ಪಿನಾಂಗ್ ತಲುಪಿ, ಅಲ್ಲಿ ಕಂಪನಿಯ ಕ್ಯಾಪ್ಟನ್ ಫ್ರಾನ್ಸಿಸ್ ಲೈಟ್ ಬ್ರಿಟಿಷ್ ವಸಾಹತು ಸ್ಥಾಪಿಸಿದ. ಅದು ಅವರ ಸರಕು ಸಾಗಾಣಿಕೆಯ ಬಂದರಾಯಿತು. ಬ್ರಿಟಿಷ್ ದೊರೆ 3ನೇ ಜಾರ್ಜ್ ನೆನಪಿನಲ್ಲಿ ಆ ನಗರಕ್ಕೆ 'ಜಾರ್ಜ್ ಟೌನ್' ಎಂದು ಹೆಸರಿಸಲಾಗಿದೆ.

2008ರಲ್ಲಿ ಜಾರ್ಜ್ ಟೌನನ್ನು ವಿಶ್ವ ಪಾರಂಪರಿಕ ತಾಣವೆಂದು ಯುನೆಸ್ಕೊ ಗುರುತಿಸಿದ ನಂತರ 2009ರಲ್ಲಿ ಜಾರ್ಜ್ ಟೌನನ್ನು ಕಲೆಯಿಂದ ಮತ್ತಷ್ಟು ಸುಂದರಗೊಳಿಸಲು ಪಿನಾಂಗ್ ರಾಜ್ಯ ಸರ್ಕಾರವು ಹೊಸ ವಿಚಾರಗಳಿಗಾಗಿ